251

ಕೋಲಾರ ಡಿಸ್ಟ್ರಿಕ್ಟು.

ತಾರೀಖು 10ನೆ ಮೂಹ ಮೇ 1907.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಪುರವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಿಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಿಚ್ಛಾನುಸಾರ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ, ಅಥವಾ ಜಮೀನಿನಲ್ಲಿ ತನಗೆ ಹಕ್ಕು ಇಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಯ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ವುವುಕೂಫ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗಾಗಿ ಗವರ್ನ್‌ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಜ್ಞೆರು ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವ ನೀರಿಗೆ ಯಾ ಬೇರೀಜಿಗೆ	ಸಾಲಿಯಾನಾ ಸರಕಾರಕ್ಕೆ ಸಲ್ಲತಕ್ಕ ಕ್ರಿಸ್ತಿಕೆ	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ಮತ್ತು ಸ್ಥಳ.
					ಎ. ಗು.	ರೂ. ಆ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಕೋಲಾರ	ಹೊಳಲೂರು	ಜೋಡಿ ಬ್ಯಾಲಹಳ್ಳಿ	ಶಿಂಪೇಕ ಖಾಸ್ಮಿ ಮೈಸೂರಿ.	ಪರಂಪೋಕು 155 13	4 12			19ನೆ ಜೂನ್ 1907ನೆ ಇನೆದಿ, ಕೋಲಾರ ತಾಲ್ಲೂಕು ಕಛೇರಿ.
					ಖುಷ್ಕ ... 243 9	346 12	185 5 2	221 10 0	
					ತರಿ ... 20 38	76 6			
					ಟಾಗಾಯತು 1 12	5 0			
						432 14			

ಗ್ರಾಮಕ್ಕೆ ಚಕ್ಕುಬಂದಿ.
ಪೂರ್ವಕ್ಕೆ—ತಿಪ್ಪಸಂದ್ರ.
ಪಶ್ಚಿಮಕ್ಕೆ—ಪಾರೆಹೊಸಹಳ್ಳಿ.
ಉತ್ತರಕ್ಕೆ—ಮತ್ತಿಕುಂಟೆ.
ದಕ್ಷಿಣಕ್ಕೆ—ಪಾರೆ ಹೊಸಹಳ್ಳಿ.

ಸಿ. ಶ್ರೀಕಂಠೇಶ್ವರ ಐಯ್ಯರ್,
ಡೆಪ್ಯೂಟಿ ಕಮಿಷನರ.